ಮಾಡದಂತೆ ತಡೆಯಾಜ್ಞೆ ತನ್ನಿ. ಇಲ್ಲದಿದ್ದರೆ, ನಿಮಗೂ ಹಾಗೂ ಸರ್ಕಾರಕ್ಕೂ ಮುಜುಗರ... ಹಾಂ ಹಾಗೇ ಸಾಮಾಜಿಕ ಜಾಲತಾಣಗಳಲ್ಲೂ ಹಾಕದಂತೆ ನಿರ್ಬಂಧಿಸಿ. ನಿಮ್ಮಲ್ಲಿಗೆ ನನ್ನ ಸ್ನೇಹಿತ ವಕೀಲ ಬರಲಿದ್ದಾನೆ... ಮೊದಲು ಮಾಧ್ಯಮದವರನ್ನು ಸಂಭಾಳಿಸಿ..."

ಅವರಿನ್ನೂ ಫೋನ್ ಇಟ್ಟಿರಲಿಲ್ಲ... ಆಗಲೇ ಜಗದೀಶಚಂದ್ರ ಅವರ ಪಿಎ ಓಡಿ ಬಂದು, "ಸರ್ ಪ್ರೆಸ್‌ನವರು ಬಂದಿದ್ದಾರೆ... ತಡೆಯಲು ಆಗುತ್ತಿಲ್ಲ... ಬೇಗ ಸಮಜಾಯಿಷಿ ಕೊಡಲಿಲ್ಲ ಅಂದರೆ ಮನಸ್ಸಿಗೆ ಬಂದಂತೆ ಬರೆಯುತ್ತಾರೆ ಹಾಗೂ ತೋರಿಸುತ್ತಾರೆ. ದಯವಿಟ್ಟು ಬೇಗ ಬನ್ನಿ ಸಾರ್..." ಎಂದು ಗೋಗರೆದ.

ಅವರಿಗೂ ಅನ್ನಿಸಿತು, ಡ್ರೈವರ್ ಸಿಗುವವರೆಗೂ ಮಾಡಬೇಕಾಗಿರುವ ಒಂದೇ ಕೆಲಸ ಅಂದರೆ, ಪತ್ರಕರ್ತರ ಮುಂದೆ ನಿಂತು ತಮ್ಮ ಸ್ಪಷ್ಟೀಕರಣ ಕೊಡುವುದು. ಪೊಲೀಸರು ಆಗಲೇ ಕಾರ್ಯಾಚರಣೆ ಆರಂಭಿಸಿದ್ದಾರೆ. ರಾಜ್ಯದ ಪೊಲೀಸರು ಆ ಡ್ರೈವರ್‌ನ ಹಿಂದೆ ಬಿದ್ದಾಗಿದೆ. ಅವನು ಸಿಗುವುದರಲ್ಲಿ ಸಂಶಯವೇ ಇಲ್ಲ. ಅಲ್ಲಿಯ ತನಕ ತಾವು ಮಾಡಬೇಕಾಗಿರುವ ಕೆಲಸ, 'ಡ್ಯಾಮೇಜ್ ಕಂಟ್ರೋಲ್!'

ಒಳಗಿದ್ದ ಎಲ್ಲ ಭಾವನೆಗಳನ್ನೂ ಮುಚ್ಚಿಡುತ್ತಾ ತಮ್ಮ ಎಂದಿನ ಗಂಭೀರ ಮುಖದಲ್ಲಿ ಹೊರಬಂದರು. ಇಡೀ ರಾಜ್ಯದ ಪತ್ರಕರ್ತರೆಲ್ಲ ಅಲ್ಲಿಯೇ ನೆರೆದಿದ್ದರು. ಕೆಲವು ರಾಷ್ಟ್ರೀಯ ವಾಹಿನಿಯವರೂ ಕುತೂಹಲಕ್ಕೆ ಬಂದಿದ್ದರು. ಈ ಘಟನೆಯಿಂದ ಕಂಗೆಟ್ಟು ಸ್ಪಷ್ಟೀಕರಣ ನೀಡಲು ಬರುತ್ತಾರೆ ಎಂದು ತಿಳಿದಿದ್ದ ಪತ್ರಕರ್ತರಿಗೆ ಸಣ್ಣ ಶಾಕ್!

ಯಾವುದೇ ಭಾವನೆಗಳಿಲ್ಲದೆ ಜಗದೀಶಚಂದ್ರ, "ನನ್ನ ಮನೆಯ ಡ್ರೈವರ್ ನನ್ನ ಬಳಿ ಹಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದ. ಕೆಲವು ದಿನಗಳ ಹಿಂದೆ ಸಂಬಳ ಹೆಚ್ಚಿಸಲು ಕೇಳಿಕೊಂಡಿದ್ದ. ಅವನ ಕೆಲಸ ಹಿಡಿಸದಿದ್ದರೂ ಬಹಳ ದಿನಗಳಿಂದ ನಮ್ಮೊಂದಿಗೆ ಇದ್ದ ಎನ್ನುವ ಕಾರಣದಿಂದ 'ಹಳೆಯ ಸಂಬಳಕ್ಕೇ ಇರುವುದಾದರೆ ಇರು, ಇಲ್ಲವಾದರೆ ಬೇಡ' ಎಂದಿದ್ದೆ. ನನ್ನ ಮೇಲೆ ಅದೇ ದ್ವೇಷದಿಂದ ಯಾವುದೋ ನಕಲಿ ಸಿಡಿಯನ್ನು ತಂದು ನನ್ನದೆಂದು ತೋರಿಸಿ ಬ್ಲಾಕ್‌ಮೇಲ್ ಮಾಡಲು ಪ್ರಯತ್ನಿಸಿದ. ನಾನು ಯಾವಾಗ ಪೊಲೀಸ್ ಕಂಪ್ಲೇಂಟ್ ಕೊಟ್ಟೆನೋ... ಆ ನಕಲಿ ಸಿಡಿಯನ್ನು ನಿಮಗೆಲ್ಲ ತಲುಪಿಸಿ ನನ್ನ ವ್ಯಕ್ತಿತ್ವಕ್ಕೆ ಮಸಿ ಬಳಿಯಲು ಪ್ರಯತ್ನಿಸುತ್ತಿದ್ದಾನೆ. ನನ್ನ ವಿನಂತಿ ಇಷ್ಟೇ, ಪೊಲೀಸರು ಆಗಲೇ ಅವನನ್ನು ಹುಡುಕುತ್ತಿದ್ದಾರೆ... ಹಾಗಾಗಿ ಸತ್ಯಾಸತ್ಯತೆ ತಿಳಿಯದೇ ಆ ನಕಲಿ ಸಿಡಿಯನ್ನು ಪ್ರಸಾರ ಮಾಡಬೇಡಿ'' ಎಂದು ಬರೆದುಕೊಂಡು ಬಂದು ಹೇಳಿದರೇನೋ ಎಂಬಂತೆ ಮಾತನಾಡಿದರು.

ಪತ್ರಕರ್ತರ ಯಾವ ಪ್ರಶ್ನೆಗಳಿಗೂ ಉತ್ತರಿಸುವುದಿಲ್ಲ ಎಂಬಂತೆ ಅಲ್ಲಿಂದೆದ್ದರು. ಆದರೂ ಪತ್ರಕರ್ತರು ಬಿಡಲಿಲ್ಲ, ಪ್ರಶ್ನೆಗಳ ಮಹಾಪೂರಾ ಹರಿಯಿತು.

"ಸರ್, ಆ ಸಿಡಿ ತಯಾರಿಸಿದ್ದೇನೆಂದು ಹೇಳಿದ ಫಾರಂ ಹೌಸ್ ನಿಮ್ಮದೇ ಅಂತೆ ಹೌದಾ?"

"ನಿಮ್ಮ ಡ್ರೈವರ್ ನಿಜವಾಗಲೂ ಸಿಡಿ ಮಾಡಿದ್ದಾನಾ ಅಥವಾ ನಮಗೆ ಕಳುಹಿಸಿರುವುದು ನಕಲಿ ಸಿಡಿಯಾ?''

ಜಗದೀಶಚಂದ್ರರಿಗೆ ಚೆನ್ನಾಗಿಯೇ ತಿಳಿದಿತ್ತು. ಯಾವ ಉತ್ತರವೂ ಅವರನ್ನು ಬಚಾವ್ ಮಾಡಲು ಸಾಧ್ಯವಿರಲಿಲ್ಲ... ಎಲ್ಲದರ ನಡುವೆ ಅವರ ಮನಸ್ಸಿನಲ್ಲಿದ್ದಿದ್ದು ಅದೇ...

"ಸಾಯಂಕಾಲದ ಒಳಗೆ ಆ ಡ್ರೈವರ್ ಸಿಗಬೇಕು... ಇಲ್ಲದಿದ್ದರೆ ಕೆಲಸ ಕೆಡುತ್ತದೆ!!"

ಇಡೀ ದಿನ ರಾಜ್ಯದಲ್ಲಿ ಅದೇ ಸಿಡಿಯ ಕತೆ ಹರಿದಾಡುತ್ತಿತ್ತು. ಟೀವಿ... ಇಂಟರ್‌ನೆಟ್...